ವಿದ್ಯಾರ್ಥಿಗಳು ತಮ್ಮ ಪ್ರತಿಭೆ ಸರಿಯಾಗಿ ಬಳಸಿಕೊಳ್ಳಿ

ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಆಯೋಜಿಸಿದ ಸೃಷ್ಟಿ-2026 ನಾವೀನ್ಯತಾ ವಿನಿಮಯ ಕಾರ್ಯಕ್ರಮಕ್ಕೆ ಎಸ್‌ಡಿಎಂಸಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಚಾಲನೆ ನೀಡಿದರು.

• **ಕನ್ನಡಪ್ರಭ ವಾರ್ತೆ** ಧಾರವಾಡ

ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಆಯೋಜಿಸಿದ ಸೃಷ್ಟಿ-2026 ನಾವೀನ್ಯತಾ ವಿನಿಮಯ ಕಾರ್ಯಕ್ರಮಕ್ಕೆ ಇಲ್ಲಿಯ ಎಸ್‌ಡಿಎಂ ಎಂಜಿನಿಯರಿಂಗ್ ಕಾಲೇಜಿನಲ್ಲಿ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಚಾಲನೆ ನೀಡಿದರು.

21ನೇ ಶತಮಾನ ಭಾರತದ್ದಾಗಿಸಲು ರಾಷ್ಟ್ರದ ಪ್ರತಿಯೊಬ್ಬ ಪ್ರಜೆ ಶ್ರಮಪಡಬೇಕು. ಕಳೆದ ಕೆಲವು ವರ್ಷಗಳಲ್ಲಿ ಸ್ಟಾರ್ಟಪ್‌ಗಳ ಸಂಖ್ಯೆ ಸ್ಥಿರವಾಗಿ ಮತ್ತು ಅತೀ ವೇಗವಾಗಿ ಬೆಳೆಯುತ್ತಿದೆ. ಸಮಾಜದ ಉನ್ನತಿಗಾಗಿತಮ್ಮಪ್ರತಿಭೆಸರಿಯಾಗಿಬಳಸಿಕೊಳ್ಳಬೇಕು ಎಂದರು.

ಶಾಸಕ ಅರವಿಂದ ಬೆಲ್ಲದ್ ಮಾತನಾಡಿ, ಹೊಸ ಕೌಶಲ್ಯ ವಿನಿಮಯ ಮಾಡಿಕೊಳ್ಳಲು ಮತ್ತು ಕಲಿಯಲು ಈ ಕಾರ್ಯಕ್ರಮ ವೇದಿಕೆಯಾಗಿ ಪರಿಣಮಿಸಲಿ ಎಂದರು. ಇಸ್ರೋದ ಹ್ಯೂಮನ್ ಸ್ಪೇಸ್ ಫ್ಲೈಟ್ ವಿಭಾಗದ ವಿಜ್ಞಾನಿ ಡಾ. ಬಿ.ಎಚ್.ಎಂ. ದಾರುಕೇಶ, ಭಾರತದ ಸಾಮಾನ್ಯ ನಾಗರಿಕರು ರಾಷ್ಟ್ರಕ್ಕೆ ಅಸಾಧಾರಣ ಕೊಡುಗೆ ನೀಡಿದ್ದಾರೆ. ರಾಷ್ಟ್ರ ಕಟ್ಟುವ ಜವಾಬ್ದಾರಿಯ ಕೆಲಸಗಳನ್ನು ಕೇವಲ ವೀಕ್ಷಕರಾಗಿ ನೋಡುತ್ತಾ ಉಳಿಯಬೇಡಿ, ಸಕ್ರಿಯವಾಗಿ ಪಾಲ್ಗೊಳ್ಳಿ ಎಂದು ಹೇಳಿದರು.

ವಿಟಿಯು ಬೆಳಗಾವಿಯ ಕುಲಪತಿ ಡಾ. ವಿದ್ಯಾಶಂಕರ್, ರಾಷ್ಟ್ರನಿರ್ಮಾಣದಲ್ಲಿವಿದ್ಯಾರ್ಥಿಗಳ ಜವಾಬ್ದಾರಿ ವಿವರಿಸಿದರು. ಎಬಿವಿಪಿಯ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಆಶಿಷ್ ಚಹ್ವಾಣ, ಮಾನವ ಅಭಿವೃದ್ಧಿಯು ಯಾವಾಗಲೂ ಸಂಶೋಧನೆ ಮತ್ತು ನಾವೀನ್ಯತೆಯಿಂದ ಪ್ರೇರಿತವಾಗಿದೆ. ಎಲ್ಲಾ ಇಕೋಸಿಸ್ಟಮಗಳು ಜನರಿಗೆ ಚೌಕಟ್ಟಿನಾಚೆ ಯೋಚಿಸಲು ಅನುವು ಮಾಡಿಕೊಡಬೇಕು ಮತ್ತು ಮಾನವಕುಲದ ಕಲ್ಯಾಣಕ್ಕಾಗಿ ರಾಷ್ಟ್ರದ ಜನಸಂಖ್ಯಾ ಅಭಿವೃದ್ಧಿ ಮತ್ತು ಪ್ರತಿಭೆಯನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಹೇಳಿದರು.

ಎಸ್‌ಡಿಎಂಸಿ ಸೊಸೈಟಿ ಕಾರ್ಯದರ್ಶಿ ಜೀವಂಧರ ಕುಮಾರ್‌ಅಧ್ಯಕ್ಷತೆ ವಹಿಸಿದ್ದರು. ಎಬಿವಿಪಿಯ ರಾಜ್ಯಾಧ್ಯಕ್ಷ ಡಾ. ರವಿ ಮಂಡ್ಯ, ಪ್ರಾಂಶುಪಾಲ ಡಾ. ರಮೇಶ ಚಕ್ರಸಾಲಿ, ಗೋಪಿ ರಂಗಸ್ವಾಮಿ ಇದ್ದರು. ವಿವಿಧ ಸ್ಪರ್ಧೆ ಮತ್ತು ಪ್ರಾಜೆಕ್ಟ್ ಪ್ರದರ್ಶನ, ಹ್ಯಾಕ್ಥಾನ್ ಕಾರ್ಯಕ್ರಮಗಳಲ್ಲಿ ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಐದು ದಿನದ ಇನ್‌ಕಾಮೆಕ್ಸ್‌ಗೆ ತೆರೆ

ಹು-ಧಾ ವಾಣಿಜ್ಯಕಾಶಿಯಾಗಿ ಹೊರಹೊಮ್ಮಲಿ: ಜಿಲ್ಲಾಧಿಕಾರಿ ಸ್ನೇಹಲ್ ಅಭಿಮತ

• **ಕನ್ನಡಪ್ರಭ ವಾರ್ತೆ** ಹುಬ್ಬಳ್ಳಿ

ಕಳೆದ 5 ದಿನಗಳಿಂದ ನಗರದಲ್ಲಿ ನಡೆದ ಕೈಗಾರಿಕಾ ಮತ್ತು ವಾಣಿಜ್ಯ ವಸ್ತು ಪ್ರದರ್ಶನ ಇನ್‌ಕಾಮೆಕ್ಸ್-2026ಕ್ಕೆ ಬುಧವಾರ ತೆರೆಬಿದ್ದಿತು.

ಇಲ್ಲಿನ ಅಮರಗೋಳ ಎಪಿಎಂಸಿಯಲ್ಲಿನ ಹು-ಧಾ ವಿವಿಧೋದ್ದೇಶ ವಸ್ತು ಪ್ರದರ್ಶನ ಕೇಂದ್ರದಲ್ಲಿ ಕೆಸಿಸಿಐ ವತಿಯಿಂದ ಇನ್‌ಕಾಮೆಕ್ಸ್ ಆಯೋಜಿಸಲಾಗಿತ್ತು.

ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿದ್ದ ಜಿಲ್ಲಾಧಿಕಾರಿ ಆರ್.ಸ್ನೇಹಲ್ ಮಾತನಾಡಿ, ಯಾವುದೇ ಭಾಗದ ಅಭಿವೃದ್ಧಿಯಾಗಬೇಕೆಂದರೆ ಆ ಪ್ರದೇಶದಲ್ಲಿನ ಕೈಗಾರಿಕಾಭಿವೃದ್ಧಿಯೂ ಮುಖ್ಯ ಪಾತ್ರವಹಿಸುತ್ತದೆ ಎಂದರು.

ಕೈಗಾರಿಕೆಗಳು ಆ ಪ್ರದೇಶಾಭಿವೃದ್ಧಿಗೆ ತನ್ನದೇ ಆದ ಕೊಡುಗೆ ನೀಡುತ್ತವೆ. ಜತೆಗೆ ಆ ಪ್ರದೇಶವನ್ನು ಗುರುತಿಸುವಂತೆಯೂ ಮಾಡುತ್ತದೆ. ಲಾಜಿಸ್ಟಿಕ್‌ನಲ್ಲಿ ಹುಬ್ಬಳ್ಳಿ, ಧಾರವಾಡ ದೇಶದಲ್ಲೇ ಅತ್ಯಂತ ಹೆಸರು ಪಡೆದಿದೆ. ಇದು ಹೆಮ್ಮೆಯ ವಿಷಯ ಎಂದರು.

ಸದ್ಯ ಧಾರವಾಡವನ್ನು ವಿದ್ಯಾಕಾಶಿ ಎಂದು ಕರೆಯಲಾಗುತ್ತದೆ. ಹೆಚ್ಚೆಚ್ಚುವಾಣಿಜ್ಯ, ಕೈಗಾರಿಕೆಗಳು ಬರುವ ಮೂಲಕ ವಾಣಿಜ್ಯ ಕಾಶಿ ಎಂತಲೂ ಆಗಲಿ. ಕೈಗಾರಿಕೆಗಳ ಅಭಿವೃದ್ಧಿಗೆ ಬೇಕಾದ ಸಹಾಯ, ಸಹಕಾರ ಮಾಡಲು ಜಿಲ್ಲಾಡಳಿತ ಸಿದ್ಧವಾಗಿದೆ ಎಂದು ಹೇಳಿದರು.

10 ವರ್ಷ ಬಳಿಕ ಆಯೋಜಿಸಿರುವ ಇನ್‌ಕಾಮೆಕ್ಸ್ ಯಶಸ್ವಿಯಾಗಿದೆ. ಸದ್ಯ ಕೆಲವೊಂದಿಷ್ಟು ಮಹಿಳಾ ಉದ್ಯಮಿಗಳು ಇನ್‌ಕಾಮೆಕ್ಸ್‌ನಲ್ಲಿ ಪಾಲ್ಗೊಂಡಿದ್ದುಂಟು. ಮುಂದೆ ಇನ್ನು ಹೆಚ್ಚಿನ ಪ್ರಮಾಣದಲ್ಲಿ ಮಹಿಳಾ ಉದ್ಯಮಿಗಳು ಬರುವಂತಾಗಲಿ ಎಂದರು.

ಅಧ್ಯಕ್ಷತೆ ವಹಿಸಿದ್ದ ಕೆಸಿಸಿಐ ಅಧ್ಯಕ್ಷ ಜಿ.ಕೆ. ಆದಪ್ಪಗೌಡರ ಮಾತನಾಡಿ, ಉತ್ತರ ಕರ್ನಾಟಕದ ಕೈಗಾರಿಕೋದ್ಯಮ ಬೆಳೆಯಲು ಇನ್‌ಕಾಮೆಕ್ಸ್ ವೇದಿಕೆಯಾಗಿದೆ. 2030ರಲ್ಲಿ ಮತ್ತೆ ಇನ್‌ಕಾಮೆಕ್ಸ್ ಆಯೋಜಿಸಲಾಗುವುದು ಎಂದ ಅವರು, ವಿವಿಧ ವಸ್ತು ಪ್ರದೇಶ ಕೇಂದ್ರವನ್ನು ಜಿಲ್ಲೆಯಲ್ಲಿ ನಡೆಯುವ ಉಳಿದ ವಸ್ತು ಪ್ರದರ್ಶನಕ್ಕೂ ಬಳಕೆಯಾಗುವಂತಾಗಬೇಕು. ಈ ನಿಟ್ಟಿನಲ್ಲಿ ಜಿಲ್ಲಾಡಳಿತ ಕ್ರಮಕೈಗೊಳ್ಳಬೇಕು ಎಂದು ಮನವಿ ಮಾಡಿದರು.

ಇನ್‌ಕಾಮೆಕ್ಸ್ ಚೇರ್‌ಮನ್ ಮಹಾದೇವ ಕರಮರಿ ಮಾತನಾಡಿ, 1996ರಿಂದ ಇನ್‌ಕಾಮೆಕ್ಸ್ ಆಯೋಜಿಸುತ್ತ ಬರಲಾಗುತ್ತಿದೆ. 2022ರಲ್ಲಿ ಆಯೋಜಿಸಿರಲಿಲ್ಲ. ಇದು 6ನೇ ಪ್ರದರ್ಶನವಾಗಿದ್ದು ಎಲ್ಲರನ್ನು ಒಗ್ಗೂಡಿಸಲು, ಒಂದೆಡೆ ಸೇರಲು ಅನುವು ಆಯಿತು. 9 ಎಕರೆ ಜಾಗದ ವಿವಿಧೋದ್ದೇಶ ವಸ್ತು ಪ್ರದರ್ಶನ ಕೇಂದ್ರವು ಇನ್ನೂ ಹೆಚ್ಚು ಅಭಿವೃದ್ಧಿ ಹೊಂದಬೇಕು. ಕನ್ವೆನ್ಷನ್ ಹಾಲ್ ಮತ್ತು 20 ಸಾವಿರ ಚದುರ ಅಡಿ ವಿಸ್ತೀರ್ಣದ ಭವನ ನಿರ್ಮಿಸಬೇಕಿದೆ. ಇದಕ್ಕೆ ಜಿಲ್ಲಾಡಳಿತ ನೆರವು ನೀಡಬೇಕು ಎಂದರು.

ಇದೇ ವೇಳೆ ಇನ್‌ಕಾಮೆಕ್ಸ್‌ನಲ್ಲಿ ಪಾಲ್ಗೊಂಡಿದ್ದ ಮಳಿಗೆದಾರರಿಗೆಪಾರಿತೋಷಕಮತ್ತುಪ್ರಮಾಣಪತ್ರ ಪ್ರದಾನ ಮಾಡಿದರು. ಕೆಸಿಸಿಐ ಮಾಜಿ ಅಧ್ಯಕ್ಷರಾದ ಮಹೇಂದ್ರ ಲದ್ದಡ, ವಿನಯ ಜವಳಿ, ರಮೇಶ ಪಾಟೀಲ, ಪದಾಧಿಕಾರಿಗಳಾದ ಉದಯ ರೇವಣಕರ, ಪ್ರವೀಣ ಅಗಡಿ, ಸಿದ್ದೇಶ್ವರ ಕಮ್ಮಾರ, ವೀರಣ್ಣ ಕಲ್ಲೂರ, ಜಯಪ್ರಕಾಶ ಟೆಂಗಿನಕಾಯಿ, ಪ್ರಕಾಶ ಶೃಂಗೇರಿ, ಅಶೋಕ ಗಡಾದ, ಶಶಿಧರ ಶೆಟ್ಟರ್, ನಿಂಗಪ್ಪ ಬಿರಾದಾರ ಇದ್ದರು.

ಇನ್‌ಕಾಮೆಕ್ಸ್‌ನಲ್ಲಿ ಜಿಲ್ಲಾಧಿಕಾರಿ ಸ್ನೇಹಲ್ ಅವರನ್ನು ಸನ್ಮಾನಿಸಲಾಯಿತು.

10 ವರ್ಷ ಬಳಿಕ ಆಯೋಜಿಸಿರುವ ಇನ್‌ಕಾಮೆಕ್ಸ್ ಯಶಸ್ವಿಯಾಗಿದೆ. ಸದ್ಯ ಕೆಲವೊಂದಿಷ್ಟು ಮಹಿಳಾ ಉದ್ಯಮಿಗಳು ಇನ್‌ಕಾಮೆಕ್ಸ್‌ನಲ್ಲಿ ಪಾಲ್ಗೊಂಡಿದ್ದುಂಟು. ಮುಂದೆ ಇನ್ನು ಹೆಚ್ಚಿನ ಪ್ರಮಾಣದಲ್ಲಿ ಮಹಿಳಾ ಉದ್ಯಮಿಗಳು ಬರುವಂತಾಗಲಿ.

• **ಆರ್.ಸ್ನೇಹಲ್** ಜಿಲ್ಲಾಧಿಕಾರಿ

MANAPPURAM FINANCE LTD.

CIN : L65910KL1992PLC006623
Registered Office : W - 4/ 638A, Manappuram House, P.O. Valapad, Thrissur - 680 567, Kerala, India

ಹರಾಜು ಪ್ರಕಟಣೆ

ಈ ಕೆಳಗಿನ ಖಾತೆಗಳಲ್ಲಿ ಅಡವಿಟ್ಟಿರುವ ಚಿನ್ನಾಭರಣಗಳ ಸಾರ್ವಜನಿಕ ಹರಾಜನ್ನು 16/05/2026 ರಂದು ಬೆಳಿಗ್ಗೆ 10.00 ಗಂಟೆಯಿಂದ ಈ ಕೆಳಗಿನ ಶಾಖೆಗಳಲ್ಲಿ ನಡೆಸಲು ಉದ್ದೇಶಿಸಲಾಗಿದೆ ಎಂದು ಈ ಮೂಲಕ ವಿಶೇಷವಾಗಿ ಸಾಲಗಾರರಿಗೆ ಮತ್ತು ಸಾರ್ವಜನಿಕರಿಗೆ ತಿಳಿಸಲಾಗಿದೆ. ನೋಂದಾಯಿತ ಪತ್ರಗಳ ಮೂಲಕ ತಿಳಿಸಲಾಗಿದ್ದರೂ ಸಾಲದ ಮೊತ್ತವನ್ನು ಪಾವತಿಸಲು ವಿಫಲರಾದ ಸುಸ್ತಿದಾರ ಗ್ರಾಹಕರ ಚಿನ್ನದ ಆಭರಣಗಳನ್ನು ಹರಾಜು ಮಾಡಲಾಗುತ್ತದೆ. ಹರಾಜಾಗದ ವಸ್ತುಗಳನ್ನು ಯಾವುದೇ ಸೂಚನೆ ಇಲ್ಲದೆ ಬೇರೆ ಯಾವುದೇ ದಿನಗಳಲ್ಲಿ ಹರಾಜು ಮಾಡಲಾಗುವುದು. ಹರಾಜಿನ ದಿನಾಂಕದಂದು ಚಿನ್ನದ ಮಾರುಕಟ್ಟೆ ಬೆಲೆ ಅಥವಾ ಸರಾಸರಿ 30 ದಿನಗಳ IBJA ದರದ 85%, ಯಾವುದು ಹೆಚ್ಚೋ ಅದರ ಆಧಾರದ ಮೇಲೆ ಮೀಸಲು ಬೆಲೆಯನ್ನು ನಿಗದಿಪಡಿಸಲಾಗುತ್ತದೆ. ಸ್ಥಳ ಅಥವಾ ದಿನಾಂಕದಲ್ಲಿನ ಬದಲಾವಣೆಯನ್ನು (ಯಾವುದಾದರೂ ಇದ್ದರೆ) ಹರಾಜು ಕೇಂದ್ರದಲ್ಲಿ ಮತ್ತು ಕಂಪನಿಯ ವೆಬ್‌ಸೈಟ್‌ನಲ್ಲಿ ಪ್ರದರ್ಶಿಸಲಾಗುತ್ತದೆ. ಕೆಳಗೆ ನೀಡಲಾದ ವಿವರಗಳು ಶಾಖೆಯ ಹೆಸರು, ಸಾಲದ ಸಂಖ್ಯೆ, ಗ್ರಾಹಕರ ಹೆಸರು, ಒಟ್ಟು ಬಾಕಿ ಮೊತ್ತ ('ನಲ್ಲಿ) ಐಟಂ ಹೆಸರಿನ ಕ್ರಮದಲ್ಲಿದೆ

ಅಡವುಗಳ ಪಟ್ಟಿ :

ಬಳ್ಳಾರಿ, ಬೆಂಗಳೂರು ರೋಡ್ ಬಳ್ಳಾರಿ, 0104500730044428, ವನ್ನೂರ್ ವಾಲಿ ಪಿ, 200532/–, ಫಿಂಗರ್ ರಿಂಗ್ಸ್ 1,ಲಾಕೆಟ್ 1,ಡ್ರಾಪ್ಸ್ & ಸ್ಟಡ್ 1,ಚೈನ್ 2, ಬಳ್ಳಾರಿ ರಸ್ತೆ ಹೊಸಪೇಟೆ, 0128150700045856, ನಂದಿನಿ, 13000/–, ಸ್ಟಡ್ 1, 0128150730037423, ಲಸಿಮಾ ಬೀ, 23529/–, ಫಿಂಗರ್ ರಿಂಗ್ಸ್ 1,ಉ–ಡ್ರಾಪ್ಸ್ 1, ಕೊಪ್ಪಳ , ಗಂಗಾವತಿ ಬಸ್ ಸ್ಟ್ಯಾಂಡ್, 0129000700049717, ಸೋಮನಾಥ್ ಕೆ ಎಂ, 15000/–, ಡ್ರಾಪ್ಸ್ 1, 9741, ರೇಣುಕಾದೇವಿ, 10300/–, ಉ–ಡ್ರಾಪ್ಸ್ 1, 0129000730029706, ಮಂಜುನಾಥ, 21729/–, ಸ್ಟಡ್ 1, ಹಾವೇರಿ, ಗೌಳೀ ಗಲ್ಲೀ ರಾಣೇ ಬೆನ್ನೂರು, 0132560730026082, ಮಲ್ಲಿಕಾರ್ಜುನ ಮಹದೇವಪ್ಪ ಡೊಳ್ಳಿನ, 38856/–, ಇಯರ್ ರಿಂಗ್ಸ್ 1, ಬಳ್ಳಾರಿ, ಹಗರಿ ಬೊಮ್ಮನಹಳ್ಳಿ, 0118320700069013, ಶೇಖಾವಲಿ ಸಾಬ್, 13310/–, ಫಿಂಗರ್ ರಿಂಗ್ಸ್ 1, ಕೊಪ್ಪಳ , ಜವಾಹರ ಮೇನ್ ರೋಡು ಕೊಪ್ಪಳ, 0128550700057606, ಗಂಗವ್ವ, 44600/–, ಸ್ಟಡ್ 1, ಧಾರವಾಡ, ಕಲಘಟಗಿ, 0122710700069012, ಗುರುನಗೌಡ ಕಲ್ಲನಗೌಡ ಭಾವಿಕಟ್ಟಿ, 606000/–, ಚೈನ್ 1, ಕೊಪ್ಪಳ , ಕಾರಡಗಿ, 0136240700016063, ರಾಜೇಶ್, 31000/–, ಸ್ಟಡ್ 1, ಕುಷ್ಟಗಿ, 0110620730037700, ದೇವಮ್ಮ ಹಳ್ಳಿ, 27029/–, ಸ್ಟಡ್ 1, ಎಲ್‌ಜಿ ರೋಡು ಗಂಗಾವತಿ, 0132430700047490, ಆಯಿಷಾ ತಬಸುಮ್ಮ, 60000/–, ಲಾಕೆಟ್ 1, ಹಾವೇರಿ, ಶಿಗ್ಗಾಂವ, 0115810730034036, ಶಬಾನಾ ಬಾಬುಲಾಲ್ ಮುಲ್ಲಾನವರ್, 42512/–, ಲಾಕೆಟ್ 1, ಗದಗ , ಶಿರಹಟ್ಟಿ, 0118200700062918, ಪ್ರೀತಿ ಡೋನಿ, 19003/–, ಸ್ಟಡ್ 1, 2955, ಇರ್ಫಾನ್ ಹೆಸರೂರು, 19499/–, ಲಾಕೆಟ್ 1,

ಮೇಲಿನ ಹರಾಜಿನಲ್ಲಿ ಭಾಗವಹಿಸಲು ಬಯಸುವ ವ್ಯಕ್ತಿಗಳು ಈ ಮುಂದೆ ತಿಳಿಸಿರುವುದನ್ನು ಅನುಸರಿಸತಕ್ಕದ್ದು:– ಆಸಕ್ತಿಯುಳ್ಳ ಸವಾಲು ಕೂಗುವವರು (ಬಿಡ್ಡರ್ ಗಳು) ಎನ್‌ಇಎಫ್‌ಟಿ/ಆರ್‌ಟಿಜಿಎಸ್ ವಿಧಾನದ ಮೂಲಕ ರೂ. 10,000/ ಅನ್ನು ಇಎಂಡಿ (ವಿಫಲಗೊಂಡ ಸವಾಲು ಕೂಗುವವರಿಗೆ ಮರುಪಾವತಿಯಾಗುವಂಥದ್ದು) ಆಗಿ ಹರಾಜಿನ ದಿನದಂದೇ ಸಲ್ಲಿಸಬೇಕು. ಸವಾಲು ಕೂಗುವವರು ಮಾನ್ಯವಾದ ಐಡಿ ಕಾರ್ಡ್/ಪ್ಯಾನ್ ಕಾರ್ಡ್ ಇಟ್ಟುಕೊಂಡಿರಬೇಕು. ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು 9072607147 ಅನ್ನು ಸಂಪರ್ಕಿಸಿ.

ಅಧಿಕೃತ ಅಧಿಕಾರಿ.
ಮಣಪ್ಪುರಂ ಫೈನಾನ್ಸ್ ಲಿ. ಪರವಾಗಿ

ನೈಋತ್ಯ ರೈಲ್ವೆ

ಇ–ಪ್ರೊಕ್ಯೂರ್‌ಮೆಂಟ್ (ಐಆರ್‌ಇಪಿಎಸ್)
ಟೆಂಡರ್ ಸೂಚನೆ ಸಂಖ್ಯೆ: ಎಚ್–ಜಿಎಸ್–ಯುಬಿಎಲ್–01–2026–27 ದಿನಾಂಕ: 23.04.26

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗೆ ಸಹಿ ಮಾಡಿರುವವರು ಈ ಕೆಳಗಿನ ಕೆಲಸಕ್ಕಾಗಿ ಇ-ಟೆಂಡರ್ ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ಹುಬ್ಬಳ್ಳಿ ವಿಭಾಗ: ಬಳ್ಳಾರಿ – ರಾಯದುರ್ಗ ವಿಭಾಗ: ಓಬಳಾಪುರಂ ನಿಲ್ದಾಣದಲ್ಲಿ (ಹಂತ II) ಸಂಬಂಧಿತ ಸಿವಿಲ್, ಟ್ರ್ಯಾಕ್, ಸಿಗ್ನಲ್, ಟಿಆರ್‌ಡಿ ಮತ್ತು ಎಲೆಕ್ಟ್ರಿಕಲ್ (ಸಾಮಾನ್ಯ) ಕೆಲಸಗಳೊಂದಿಗೆ ಆರ್&ಡಿ ಸೌಲಭ್ಯಗಳನ್ನು ಹೊಂದಿರುವ ಎರಡು ಹೆಚ್ಚುವರಿ ಲೂಪ್ ಲೈನ್‌ಗಳನ್ನು ಒದಗಿಸುವುದು (ಸಂಯೋಜಿತ ಟೆಂಡರ್)	ರೂ.29,08,46.770/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 22–05–2026 ರಂದು 11.00 ಗಂಟೆಗಳವರೆಗೆ

ಹೆಚ್ಚಿನ ಮಾಹಿತಿಗಳಿಗಾಗಿ: **www.ireps.gov.in** ಲಾಗಿನ್ ಮಾಡಿ

ಮುಖ್ಯ ಯೋಜನಾ ವ್ಯವಸ್ಥಾಪಕರು/ಗತಿ ಶಕ್ತಿ/ ಹುಬ್ಬಳ್ಳಿ

ಪಿಯುಬಿ/70/ಎಐಡಿ360/ಪಿಆರ್‌ಬಿ/ಎಸ್‌ಡಬ್ಲ್ಯೂಆರ್/2026–27

ಸುಲಭ ಟಿಕೆಟ್ ಬುಕ್ಕಿಂಗ್, PNR ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | @SWRAILWAYHQ | @sw_railways

ನೈಋತ್ಯ ರೈಲ್ವೆ

ಇ–(ಐಆರ್‌ಇಪಿಎಸ್) ಟೆಂಡರ್ ಸೂಚನೆ ಸಂಖ್ಯೆ. 03 ಯುಬಿಎಲ್ 2026–27 ದಿನಾಂಕ: 24.04.2026

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗೆ ಸಹಿ ಮಾಡಿರುವವರು ಈ ಕೆಳಗಿನ ಕೆಲಸಕ್ಕಾಗಿ ಇ-ಟೆಂಡರ್ ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ಹುಬ್ಬಳ್ಳಿ ವಿಭಾಗ: ಹುಬ್ಬಳ್ಳಿ– ಗದಗ ರಸ್ತೆ, ಹುಬ್ಬಳ್ಳಿಯಲ್ಲಿರುವ ಹಳೆಯ ಆಸ್ಪತ್ರೆಯ ಹಳೆಯ ಕಟ್ಟಡದ ಸುಧಾರಣೆ (ಉಳಿಕೆ ಕೆಲಸ)	ರೂ.1,53,03,856.00/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 18–05–2026 ರಂದು 11.00 ಗಂಟೆಗಳವರೆಗೆ

ಹೆಚ್ಚಿನ ಮಾಹಿತಿಗಳಿಗಾಗಿ: **www.ireps.gov.in** ಲಾಗಿನ್ ಮಾಡಿ

ಹಿರಿಯ ವಿಭಾಗೀಯ ಅಭಿಯಂತರರು/ಸಮನ್ವಯ/ ಹುಬ್ಬಳ್ಳಿ

ಪಿಯುಬಿ/75/ಎಐಡಿ360/ಪಿಆರ್‌ಬಿ/ಎಸ್‌ಡಬ್ಲ್ಯೂಆರ್/2026–27

ಸುಲಭ ಟಿಕೆಟ್ ಬುಕ್ಕಿಂಗ್, PNR ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | @SWRAILWAYHQ | @sw_railways

ಅಸಲು ದಾವಾ ನಂ. 251/2026

ಮಾನ್ಯ 5ನೇ ಅಧಿಕ ದಿವಾಣಿ ನ್ಯಾಯಾಧೀಶರು ಹುಬ್ಬಳ್ಳಿ ಇವರ ನ್ಯಾಯಾಲಯದಲ್ಲಿ

ವಾದಿ : ಶ್ರೀಮತಿ ಲಕ್ಷ್ಮೀ ಕೋಂ ಬಸವರಾಜ ತಳವಾರ

ವಿರುದ್ಧ

ಪ್ರತಿವಾದಿಯರು : 1) ರಾಜ್ಯ ಸರಕಾರ, ಪರವಾಗಿ ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲಾ ಧಾರವಾಡ ಮತ್ತು ಇತರರು

ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ 5 ನಿಯಮ 20 (ಎ-1) ರ ಕಳಗೆ ಸಮನ್ಸ

ಮೇಲ್ಕಂಡ ಪ್ರಕರಣವನ್ನು ವಾದಿಯ ಗಂಡನಾದ **ಬಸವರಾಜ ತಂದೆ ರೇವಣಸಿದ್ದಪ್ಪ ತಳವಾರ** ಇವರು ಕಾನೂನು ದೃಷ್ಠಿಯಿಂದ ದಿ: 03–10–2018 ರಂದು ಮರಣ ಹೊಂದಿರುತ್ತಾರೆ ಅಂತಾ ಘೋಷಿಸಿ ಡಿಕ್ರಿ ಪಡೆದುಕೊಳ್ಳಲು ದಾಖಲು ಇರುತ್ತದೆ.

ಮೇಲ್ಕಂಡ ಪ್ರಕರಣವು ದಿ : 29–06–2026 ರಂದು ಮುಂಜಾನೆ 11 :00 ಗಂಟೆಗೆ ಹಾಜರಾತಿಗಾಗಿ ಮುದ್ದತ್ತು ನೇಮಿಸಿರುತ್ತದೆ. ಅಂದು ಮಾನ್ಯ ನ್ಯಾಯಾಲಯಕ್ಕೆ ಸಾರ್ವಜನಿಕರದು ಯಾರದಾದರೂ ಯಾವುದೇ ರೀತಿಯ ತಕರಾರು ವಗ್ಗೈರೆ ಇದ್ದಲ್ಲಿ ತಾವಾಗಲೀ ಅಥವಾ ತಮ್ಮ ಪರವಾಗಿ ವಕೀಲರಾಗಲಿ ಹಾಜರಾಗಿ ಸಲ್ಲಿಸತಕ್ಕದ್ದು ಒಂದು ವೇಳೆ ಯಾರೂ ಹಾಜರಾಗದೇ ಇದ್ದಲ್ಲಿ ಏಕತರ್ಫಿ ಹುಕುಂ ಮಾಡಲಾಗುವದು ಅಂತಾ ಈ ಮೂಲಕ ತಿಳಿಸಲಾಗಿದೆ.

ಈ ಹೊತ್ತು ದಿ:29–04–2026 ರಂದು ನನ್ನ ಸಹಿ ವ ಕೋರ್ಟಿನ ಮೊಹರಿನೊಂದಿಗೆ ಕೊಡಲಟ್ಟಿತು

ಕೋರ್ಟಿನ ಆಜ್ಞೆಯ ಮೇರೆಗೆ
ಸಹಿ/–ಶಿರಸ್ತೇದಾರರು
ಮಾನ್ಯ 5ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ. ನ್ಯಾಯಾಲಯ ಹುಬ್ಬಳ್ಳಿ

(ಕೋರ್ಟ ಮೊಹರು)

ಹುಬ್ಬಳ್ಳಿ
ದಿ: 29–04–2026
ಶ್ರೀ ಎಸ್. ಎನ್. ಭೈರಪ್ಪನವರ
ವಾದಿ ಪರ ವಕೀಲರು, ಹುಬ್ಬಳ್ಳಿ

P & S C No.16/2026

IN THE COURT OF III ADDITIONAL. DISTRICT SESSIONS JUDGE, DHARWAD,

PETITIONER : Shivanand S/o Yallappa Divatgi, Age: 37 Yrs, Occ: Agriculture, R/o Goudar Oni, Ugginkeri, Tq: Kalaghatagi, Dist: Dharwad

V/s

DEFENDANTS: Nil

CITATION

Whereas the petitioner has filed this petition for grnat of Probate Certificate with respect to the wills executed on 17/04/2018 & 29/03/2022 by Smt Neelavva W/o Mallappa Hosamani, resident of Ugginkeri, Tq: Kalaghatagi, Dist: Dharwad who died on 05/01/2026 bequeathing her share in agricultural land bearing Block No. 12/1, measuring 38, 13/1, measuring 1 Acre 28 Guntha, 13/3, measuring 1 acre 35 guntha, 12*2+3/1, measuring 1 acre 22 guntha, all are situated at ugginakeri village, Tq: Kalaghatagi, Dist: Dharwad and B1 No.13/2B, measuring 2 acres 38 gunthas and 120/2, measuring 1 acre 2 gunthas, situated at Kadanakoppa village, Tq: Kalaghatagi, Dist: Dharwad.

Anybody having objection in granting of the probate certificate in the name of petitioner are hereby summoned to appear in this Hon'ble Court on 08/06/2026 at 10.30 A.M., on default this court will hear the matter in accordance with law.

Given under my hand and seal of the court on the day of 25/04/2026.

Dharwad
24/04/2026

By the order of Court
SD/- C.A.O
Prl.District and Sessions Court, Dharwad.

V.R.BHAGWAT
ADVOCATE FOR THE PETITIONER.

ಜಿ & ಡಬ್ಲ್ಯೂ ಸಿ ನಂ: 77/2026

ಮಾನ್ಯ ಒಂದನೇ ಅಧಿಕ ದಿವಾಣಿ ನ್ಯಾಯಾಧೀಶರ (ಹಿ.ವಿ) ನ್ಯಾಯಾಲಯ ಹುಬ್ಬಳ್ಳಿ ಇವರ ನ್ಯಾಯಾಲಯದಲ್ಲಿ

ಅರ್ಜಿದಾರರು : 1) ನಿತೀಶ ತಂದೆ ಗಂಗಾಧರ ಅರಿಶಿನಗೇರಿ ಹಾಗೂ ಇತರರು

ವಿರುದ್ಧ

ಪ್ರತಿವಾದಿಯರು : ಯಾರೂ ಇಲ್ಲಾ

ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ 5 ನಿಯಮ 20(1ಎ) ಸಹ ಕಲಂ 151 ರಡಿಯಲ್ಲಿ ಸೈಟೇಶನ್

ಸಾರ್ವಜನಿಕರಿಗೆ ಈ ಮೂಲಕ ಯಾವತ್ತೂ ತಿಳಿಯಪಡಿಸುವುದೇನೆಂದರೆ, ಅರ್ಜಿದಾರ ನಂ.3ನೇದವರ ಅಲ್ಪವಯಿ ಮಗಳಾದ ಅರ್ಜಿದಾರ ನಂ.2ನೇದವರಾದ ಕುಮಾರಿ ಕೀರ್ತಿ ತಂದೆ ಗಂಗಾಧರ ಅರಿಶಿನಗೇರಿ ಇವಳ ಅಲ್ಪವಯಿ ಸಂರಕ್ಷಣಾದಾರಳೆಂದು ನೇಮಣೂಕಿ ಮಾಡಲು ಹಾಗೂ ಅಲ್ಪವಯಿ ಅರ್ಜಿದಾರಳು ಅರ್ಜಿ ಆಸ್ತಿಯಲ್ಲಿ ಹೊಂದಿರುವ ಹಿಸ್ಸಾದ ಆಸ್ತಿಯನ್ನು ಮಾರಾಟ ಮಾಡಲು ಪ್ರಮಾಣ ಪತ್ರ ನೀಡುವ ಕುರಿತಾಗಿ ಮಾಗಣಿಯನ್ನು ಕೋರಿರುತ್ತಾರೆ.

ಅರ್ಜಿದರ ನಂ.2ನೇದವರ ಪರವಾಗಿ ಅರ್ಜಿದಾರ ನಂ.3ನೇದವರಿಗೆ ಪರವಾನಿಗೆ ವ ಮಾಗಣೆ ನೀಡಲು ಯಾವುದೇ ವ್ಯಕ್ತಿಗಳ ಯಾವುದೇ ತಕರಾರು/ ಆಕ್ಷೇಪಣೆ ಇದ್ದಲ್ಲಿ ಖುದ್ದಾಗಿ ಅಥವಾ ನ್ಯಾಯವಾದಿಗಳ ಮುಖಾಂತರ ದಿ:15/06/2026 ರಂದು ಬೆಳ್ಳಿಗ್ಗೆ 11.00 ಗಂಟೆಗೆ ಮಾನ್ಯ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು.

ಸದರಿ ದಿನಾಂಕದಂದು ಯಾವುದೇ ವ್ಯಕ್ತಿಗಳು ಹಾಜರಾಗಿ ತಕರಾರು/ಆಕ್ಷೇಪಣೆ ಸಲ್ಲಿಸದಿದ್ದಲ್ಲಿ, ಅರ್ಜಿದಾರರ ಮಾಗಣೆಗೆ ಯಾವುದೇ ಆಕ್ಷೇಪಣೆ ಇಲ್ಲವೆಂದು ಅರ್ಜಿಯನ್ನು ಅರ್ಹತೆಗೆ ಅನುಗುಣವಾಗಿ ಕಾನೂನಾತ್ಮಕವಾಗಿ ಮುಂದುವರೆಸಲಾಗುವುದ.

ನ್ಯಾಯಾಲಯದ ಸಹಿ ಮತ್ತು ಮೊಹರಿನೊಂದಿಗೆ ದಿ. 29/04/2026 ರಂದು ಹೊರಡಿಸಲಾಗಿದೆ.

ಹುಬ್ಬಳ್ಳಿ ನ್ಯಾಯಾಲಯದ ಆದೇಶದ ಮೇರೆಗೆ
25/04/2026 **ಶಿರಸ್ತೇದಾರರು**
ಮಾನ್ಯ 1ನೇ ಅಧಿಕ ದಿವಾಣಿ ನ್ಯಾಯಾಲಯ
ಎಸ್.ಆರ್.ಲಾಳಸಂಗಿ (ಹಿ.ವಿ), ಹುಬ್ಬಳ್ಳಿ,
ಅರ್ಜಿದಾರರ ಪರ ವಕೀಲರು

ಸಾರ್ವಜನಿಕ ನೋಟೀಸು

ನಮ್ಮ ಪಕ್ಷಗಾರರಾದ ಎಸ್.ಬಿ.ಐ ಬ್ಯಾಂಕ, ಧಾರವಾಡ ಇವರು ಕೊಟ್ಟ ಮಾಹಿತಿ ವ ಅಧಿಕಾರದ ಮೇಲಿಂದ ಯಾವತ್ತೂ ಸಾರ್ವಜನಿಕರಿಗೆ ಕೊಡುವ ನೋಟೀಸು ಏನೆಂದರೆ :

ಧಾರವಾಡ ಜಿಲ್ಲಾ ಧಾರವಾಡ ತಾಲೂಕ, ಚಿದಂಬರ ಕೋ ಆಪರೇಟಿವ ಹೌಸಿಂಗ ಸೋಸೈಟಿ, ಗಾಂಧಿನಗರ, ಧಾರವಾಡ ರಿ. ಸ. ನೊ: 55/ಕ, ಪ್ಲಾಟ ನಂ. 22, ವಿಸ್ತೀರ್ಣ 03 ಗುಂಟೆ 01.20 ಅಣೆ ಲಕಮನಹಳ್ಳಿ, ಧಾರವಾಡ – ಆಸ್ತಿಯ ಮಾಲೀಕರು ಶ್ರೀಮತಿ. ವಿದ್ಯಾ ಕೋಂ. ಚಿದಂಬರ ಜೋಶಿ ಅವರದಿದ್ದು, ಸದರಿ ಅವರಿಂದ ಶ್ರೀಮತಿ ಶೀವಲಿಲಾ ನಾ. ಕಳಸಣ್ಣವರ ಸದರ ಆಸ್ತಿಯನ್ನು ಖರೀದಿ ಹಿಟಿಯುವವರು ಇರುತ್ತಾರೆ. ಸದರ ಆಸ್ತಿಗೆ ಸಂಬಂಧಪಟ್ಟ ಮೂಲ ಖರೀದಿ ಪತ್ರ ಅದರ ದಸ್ತಾವೇಜು ನಂ. 2395/1989–90 ದಿ.10–01–1990ನ್ನು ನಜರಚುಕಿನಿಂದ ಲಕಮನಹಳ್ಳಿ, ಧಾರವಾಡ ದಿ. 20–04–2026 ರಂದು ಕಳೆದುಕೊಂಡಿರುತ್ತಾರೆ.

ಕಾರಣ ಸಾರ್ವಜನಕಗೆ ಈ ನೋಟಿಸಿನ ಮೂಲಕ ತಿಳಿಸುವದೇನೆಂದರೇ, ಮೇಲ್ಕಂಡ ಪ್ಲಾಟಿನ ಕುರಿತು ಬೇರೆ ಯಾರದಾದರು ಯಾವದಾದರು ಹಕ್ಕು, ಹಿತಸಂಬಂಧ, ತಂಟೆ, ತಕರಾರು, ಬ್ಯಾಂಕ ವ ಸೊಸಾಯಿಟಿ ಭೋಜಾ ವ ಸಂಚಕಾರ ಪತ್ರ ಮತ್ತು ಮೃತ್ಯು ಪತ್ರಗಳೇನಾದರು ಇದ್ದಲ್ಲಿ ಈ ನೋಟಿಸು ಪ್ರಕಟವಾದ (7) ಏಳು ದಿನಗಳೊಳಗಾಗಿ ಈ ಕೆಳಗಿನ ವಿಳಾಸಕ್ಕೆ ದಾಖಲೆಗಳೊಂದಿಗೆ ಸಲ್ಲಿಸತಕ್ಕದು ತದನಂತರ ಬಂದ ತಕರಾರುಗಳು ನಮ್ಮ ಪಕ್ಷಗಾರರ ಮೇಲೆ ಬಾಂದಾಯಿಸುವದಿಲ್ಲ. ಮತ್ತು ನಮ್ಮ ಪಕ್ಷಗಾರರು ಸದರ ಪ್ಲಾಟಿನ ಖರೀದಿಗಾಗಿ ಗೃಹ ಸಾಲವನ್ನು ಮಂಜುರಮಾಡುವರು ಅಂತಾ ಕೊಟ್ಟ

ಎಸ್.ಆರ್. ಸಾಲಮನಿ ವಕೀಲರು,
ಪ್ಲಾಟ ನಂ:6, 1 ನೇ ಕ್ರಾಸ್, 2 ನೇ ಸ್ಟೇಜ್,
ವಿಜಯನಗರ, ಹಳಿಯಾಳ ರಸ್ತೆ,
ಧಾರವಾಡ ಧಾರವಾಡ ಸೆಲ್: 9742509779
29–04–2026

ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್

(ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಮತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ)

CIN : L65110TN2014PLC097792

ನೋಂದಾಯಿತ ಕಛೇರಿ: ಕೆಆರ್‌ಎಂ ಟವರ್ಸ್, 8ನೇ ಮಹಡಿ, ಹ್ಯಾರಿಂಗ್‌ಟನ್ ರಸ್ತೆ, ಚೆಟ್‌ಪೇಟ್, ಚೆನ್ನೈ-600031. ದೂ: +91 44 4564 4000/ ಫ್ಯಾಕ್ಸ್: +91 44 4564 4022

IDFC FIRST Bank

ಅಪೆಂಡಿಕ್ಸ್-IV [ನಿಯಮ-8(1)] ಸ್ವಾಧೀನ ಸೂಚನೆ (ಸ್ಥಿರ ಆಸ್ತಿಗಾಗಿ)

ಆದಾಗ್ಯೂ, ಕೆಳಸಹಿದಾರರು ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್‌ನ (ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಮತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ) ಅಧಿಕೃತ ಅಧಿಕಾರಿಯಾಗಿ ಹಣಕಾಸು ಆಸ್ತಿಗಳ ಪ್ರಭೂತೀಕರಣ ಮತ್ತು ಪುನರ್ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ನಿರ್ಮಾಣ ಕಾಯಿದೆ, 2002 (ಆ್ಯಕ್ಟ್) ರಡಿ ಮತ್ತು ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು 2002ರ (ರೂಲ್ 3) ನಿಯಮ ಜೊತೆ ಓದಿಕೊಳ್ಳಬೇಕಾದ ಸದರಿ ಕಾಯಿದೆಯ ಪರಿಚ್ಛೇದ 13(12)ರಡಿ ಪ್ರದತ್ತವಾದ ಅಧಿಕಾರಗಳಂತೆ ಕೆಳಕಂಡಂತೆ ಸೂಚಿಸಲಾದ ಸಾಲಗಾರರಿಗೆ/ ಸಹ-ಸಾಲಗಾರರಿಗೆ ಮತ್ತು ಜಾಮೀನುದಾರರಿಗೆ ಸಾಲದ ಒಪ್ಪಂದ ಪತ್ರದ ಅನುಸಾರ ಮಂಜೂರಾದ ಸಾಲವನ್ನು ಮತ್ತು ಸಂಬಂಧಿಸಿದ ಡಿಮಾಂಡ್ ನೋಟೀಸ್‌ನಲ್ಲಿ ಒತ್ತಾಯಿಸಿರುವಂತೆ ಬಾಕಿಯಾಗಿರುವ ಮೊಬಲಗು ಮತ್ತು ಡಿಮಾಂಡ್ ನೋಟೀಸಿನ ದಿನಾಂಕದಿಂದ ಪೂರ್ತಿ ಪಾವತಿ/ ತೀರುವವರೆಗೂ ತದನಂತರದ ಬಡ್ಡಿ ಮತ್ತು ಇತರ ಚಾರ್ಜುಗಳು ಸೇರಿದ ಮೊತ್ತ ಸದರಿ ನೋಟೀಸ್‌ನ್ನು ಸ್ವೀಕರಿಸಿದ 60 ದಿನಗಳೊಳಗಾಗಿ ಪಾವತಿ ಮಾಡಲು ಸೂಚಿಸಿದ್ದರು.

ಸಾಲಗಾರರು/ಸಹ-ಸಾಲಗಾರರು/ ಜಾಮೀನುದಾರರು ಬಾಕಿ ಸಾಲದ ಮೊತ್ತವನ್ನು ಮರುಪಾವತಿ ಮಾಡಲು ವಿಫಲರಾಗಿರುತ್ತಾರೆ ಈ ಕಾರಣ ಸಾಲಗಾರರಿಗೆ/ಸಹ-ಸಾಲಗಾರರಿಗೆ/ಜಾಮೀನುದಾರರಿಗೆ ಮತ್ತು ಸಾರ್ವಜನಿಕರಿಗೆ ವಿಶೇಷವಾಗಿ ಸೂಚಿಸುವುದೇನೆಂದರೆ, ಕೆಳಸಹಿದಾರರು ಸದರಿ 2002ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ನಿಯಮ 8ರ ಜೊತೆ ಓದಿಕೊಳ್ಳಬೇಕಾದ ಸದರಿ ಕಾಯಿದೆಯ ಸೆಕ್ಷನ್ 13ರ ಉಪ-ಬಂಧ (4)ರಡಿ ಅವನಿಗೆ/ಅವಳಿಗೆ ಪ್ರದತ್ತವಾದ ಅಧಿಕಾರಗಳಂತೆ/ ಕೆಳಕಂಡಂತೆ ವಿವರಿಸಲಾದ ಆಸ್ತಿಗಳನ್ನು ಸ್ವಾಧೀನಕ್ಕೆ ಪಡೆದುಕೊಂಡಿರುತ್ತಾರೆ.

ಸಾಲದ ಖಾತಾ ಸಂಖ್ಯೆ	ಸಾಲಗಾರರು/ ಸಹ- ಸಾಲಗಾರರು/ ಮತ್ತು ಜಾಮೀನುದಾರರ ಹೆಸರು	ಅಡಮಾನಿತ ಆಸ್ತಿಗಳ ವಿವರ	ಡಿಮಾಂಡ್ ನೋಟೀಸ್ ದಿನಾಂಕ	ಡಿಮಾಂಡ್ ನೋಟೀಸ್ ಬಾಕಿ ಮೊತ್ತ (ರೂ.)	ಸ್ವಾಧೀನತೆಯ ವಿಧ ಮತ್ತು ದಿನಾಂಕ
40917557	1. ಹಜರತ್ ಅಲಿ ಗೌಡಗೇರಿ 2. ಬಿಬಿಜಾನ್ ಗೌಡಗೇರಿ	ಸಕಲ ಸಮಸ್ತವೂ ಸೇರಿದಂತೆ ಮನೆ ಮತ್ತು ಬ್ಯಾಕ್ಯಾರ್ಡ್ ಆಸ್ತಿ, ಇಂಗಳಗಿ ಪಿ.ಐ.ಡಿ ಸಂಖ್ಯೆ 151300402000120154 ಆಸ್ತಿ ಸಂಖ್ಯೆ 372/ಬಿ/2, ಅಳತೆ: ಪೂರ್ವ-ಪಶ್ಚಿಮ 5.80, 8.10 ಮೀ.ಗಳು ಉತ್ತರ-ದಕ್ಷಿಣ 16.00 ಮೀ.ಗಳು, ಒಟ್ಟು ವಿಸ್ತೀರ್ಣ 111.20 ಚ.ಮೀ.ಗಳು, ನಿರ್ಮಿತ ವಿಸ್ತೀರ್ಣ 61.61 ಚ.ಮೀ.ಗಳು, ಇಂಗಳಗಿ ಗ್ರಾಮ, ತಾ: ಕುಂದಗೋಳ, ಜಿಲ್ಲೆ: ಧಾರವಾಡ, ಕರ್ನಾಟಕ -580028, ಮತ್ತು **ಚಕ್ಕುಬಂದಿ:- ಪೂರ್ವಕ್ಕೆ: ಸರ್ಕಾರಿ ರಸ್ತೆ, ಪಶ್ಚಿಮಕ್ಕೆ: ಸುಬನಸಾಬ್ ಗೌಡಗೇರಿ, ಉತ್ತರಕ್ಕೆ: ದವಲಸಾಬ್ ಗೌಡಗೇರಿ, ದಕ್ಷಿಣ: ದವಲಸಾಬ್ ಗೌಡಗೇರಿ.**	22.11.2025	ರೂ. 1,70,808.73/-	28-04-2026 ಸ್ವಾಧೀನತೆ
79687212	1. ಸೈದುಸಾಬ್ ಛಬ್ಬಿ 2. ಗುಡುಸಾಬ್ ಖಾದರ್‌ಸಾಬ್ ಛಬ್ಬಿ	ಸಕಲ ಸಮಸ್ತವೂ ಸೇರಿದಂತೆ ವಸತಿ ಆಸ್ತಿ ಗ್ರಾಮ ಪಂಚಾಯತ್ ಸಂ. ವಿಪಿಸಿ ಸಂಖ್ಯೆ. 920, ಅಳತೆ: ಪೂರ್ವ-ಪಶ್ಚಿಮಕ್ಕೆ 32 ಅಡಿ X ಉತ್ತರ-ದಕ್ಷಿಣಕ್ಕೆ 70 ಅಡಿ. = 2240 ಚದರ ಅಡಿ, ಶೇರೆವಾಡ ಗ್ರಾಮ: ಹುಬ್ಬಳ್ಳಿ, ಜಿಲ್ಲೆ: ಧಾರವಾಡ ಕರ್ನಾಟಕ-580028, ಮತ್ತು **ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ ಪಶ್ಚಿಮಕ್ಕೆ: ಆಸ್ತಿ ಶಂಕರಗೌಡ ಉಮಚಗಿ ಅವರಿಗೆ ಸೇರಿದ್ದು ಉತ್ತರಕ್ಕೆ: ರಸ್ತೆ ದಕ್ಷಿಣಕ್ಕೆ: ಆಸ್ತಿ ಮಹಾದೇವಿ ಎಸ್ ಅಮಟೂರು ಅವರಿಗೆ ಸೇರಿದ್ದು**	13.12.2025	ರೂ. 10,39,334.56/-	25-04-2026 ಸ್ವಾಧೀನತೆ
107202723	1. ಈರಣಗೌಡ ಗುರುಸಿದ್ದಗೌಡ್ ರಾಮನಗೌಡ್ರ 2. ನವೀನಗೌಡ ಗುರುಸಿದ್ದಗೌಡ ರಾಮನಗೌಡ್ರ	ಸಕಲ ಸಮಸ್ತವೂ ಸೇರಿದಂತೆ ಆಸ್ತಿಯ ವಿಪಿಸಿ ಸಂ. 3ಎ/2, ಅಳತೆ ಸುಮಾರು 15x150 ಅಡಿಯ 2250 ಚ.ಅ. ಕೋಟಗುಂದುನಾಶಿ ಗ್ರಾಮ, ಆಧಾರಗುಂಚಿ ಗ್ರಾಮಪಂಚಾಯಿತಿ, ತಾಲ್ಲೂಕು- ಹುಬ್ಬಳ್ಳಿ, ಜಿಲ್ಲ- ಧಾರವಾಡ, ಕರ್ನಾಟಕ- 580028 ಮತ್ತು **ಚಕ್ಕುಬಂದಿ:- ಪೂರ್ವಕ್ಕೆ:** ಬಸನಗೌಡ ರಾಮನಗೌಡ್ರ ರವರಿಗೆ ಸೇರಿದ ಬ್ಯಾಕ್‌ಯಾರ್ಡ್, **ಪಶ್ಚಿಮಕ್ಕೆ:** ಸಿದ್ದನಗೌಡ ಸಣ್ಣಪಾರ್ವತ್‌ಗೌಡ ರವರಿಗೆ ಸೇರಿದ ಬ್ಯಾಕ್‌ಯಾರ್ಡ್, **ಉತ್ತರಕ್ಕೆ:** ಉಳಿಕೆ ಭಾಗದ ಸ್ವಂತ ಮನೆ, **ದಕ್ಷಿಣಕ್ಕೆ:** ಸರ್ಕಾರಿ ರಸ್ತೆ.	04.12.2025	ರೂ. 9,89,254.12/-	25-04-2026 ಸ್ವಾಧೀನತೆ
152824777	1. ಮಹಾದೇವಿ ನಿಂಗಪ್ಪ ಬಂಕಾಪುರ್ 2. ನಿಂಗಪ್ಪ ಹೆಚ್ ಬಂಕಾಪುರ್ 3. ರಾಮಪ್ಪ ಬಂಕಾಪುರ್ 4. ಅಂಬವ್ವ ಕಲ್ಲಪ್ಪ ಪಟೋಲಿ	ಸಕಲ ಸಮಸ್ತವೂ ಸೇರಿದಂತೆ ಆಸ್ತಿಯ ವಿಪಿಸಿ ಸಂ. 81, ಅಳತೆ 70.63 ಚ.ಮೀ./760 ಚ.ಅ. ಗಿರಿಯಾಳ್ ಗ್ರಾಮ ಕತ್ತೂರು, ಗ್ರಾಮಪಂಚಾಯಿತಿ ತಾಲ್ಲೂಕು ಹುಬ್ಬಳ್ಳಿ, ಕರ್ನಾಟಕ. ಮತ್ತು ಆಸ್ತಿಯ **ಚಕ್ಕುಬಂದಿ:- ಉತ್ತರಕ್ಕೆ:** ಸರ್ಕಾರಿ ರಸ್ತೆ, **ದಕ್ಷಿಣಕ್ಕೆ:** ಪರಶುರಾಮ್ ಸಾಲಗಾರ್ ರವರ ಮನೆ, **ಪೂರ್ವಕ್ಕೆ:** ಮೊದೀನ್‌ಸಾಬ್ ಮುಲ್ಲನವರ್ ರವರಿಗೆ ಸೇರಿದ ತೆರೆದ ಪ್ಲಾಟ್, **ಪಶ್ಚಿಮಕ್ಕೆ:** ಮಲ್ಲೇಶಿ ಬಂಕಾಪುರ್ ರವರಿಗೆ ಸೇರಿದ ಮನೆಯ ಆಸ್ತಿ.	06.12.2025	ರೂ. 8,49,036.24/-	25-04-2026 ಸ್ವಾಧೀನತೆ

ಸಾಲಗಾರರಿಗೆ/ ಸಹ-ಸಾಲಗಾರರಿಗೆ/ ಜಾಮೀನುದಾರರಿಗೆ ಮತ್ತು ಅಲ್ಲದೆ ವಿಶೇಷವಾಗಿ ಸಾರ್ವಜನಿಕರಿಗೆ ನೀಡುವ ಎಚ್ಚರಿಕೆ ಏನೆಂದರೆ ಸದರಿ ಆಸ್ತಿಯೊಂದಿಗೆ ಯಾರು ಯಾವುದೇ ವ್ಯವಹಾರ ಮಾಡಬಾರದು ಹಾಗೂ ಮಾಡಿದ್ದೇ ಆದರೆ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್‌ನ (ಹಿಂದಿನ ಕ್ಯಾಪಿಟಲ್ ಫಸ್ಟ್ ಹೋಂ ಫೈನಾನ್ಸ್ ಲಿಮಿಟೆಡ್ ಪ್ರಸ್ತುತ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ) ಡಿಮಾಂಡ್ ನೋಟೀಸಿನ ದಿನಾಂಕದಿಂದ ಪೂರ್ತಿ ಪಾವತಿಯಾಗುವವರೆಗೂ ಬಾಕಿ ಮೊಬಲಗು/ ಇತರೆ ಚಾರ್ಜುಗಳು ಸೇರಿದ ಮೊತ್ತಕ್ಕೆ ಬಾಧ್ಯರಾಗಬೇಕಾಗುತ್ತದೆ.

ಸಹಿ/-ಅಧಿಕೃತ ಅಧಿಕಾರಿ
ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್
(ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಮತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ)

ದಿನಾಂಕ: 25.04.2026-28.04.2026
ಸ್ಥಳ: ಧಾರವಾಡ, ಕರ್ನಾಟಕ

ಕೃಷಿ ನೀತಿಯಲ್ಲಿನ ಲೋಪ ಸರಿಪಡಿಸಿ

• **ಕನ್ನಡಪ್ರಭ ವಾರ್ತೆ** ನವಲಗುಂದ

ಕೇಂದ್ರ ಸರ್ಕಾರದ ಕೃಷಿ ನೀತಿಗಳಲ್ಲಿನ ಲೋಪದೋಷ ಸರಿಪಡಿಸಿ ಹಾಗೂ ಕೃಷಿ ಪರಿಕರಗಳ ಮಾರಾಟಗಾರರ ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ನವಲಗುಂದ ಹಾಗೂ ಅಣ್ಣಿಗೇರಿ ತಾಲೂಕು ಕೃಷಿ ಪರಿಕರ ಮಾರಾಟಗಾರರ ಸಂಘದಿಂದ ವ್ಯಾಪಾರ ಸ್ಥಗಿತಗೊಳಿಸಿ ತಹಸೀಲ್ದಾರ್ ಹಾಗೂ ಕೃಷಿ ಇಲಾಖೆ ಅಧಿಕಾರಿಗಳ ಮೂಲಕ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಕೃಷಿ ಮಾರಾಟಗಾರರು ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳನ್ನು ಕೇಂದ್ರ ಸರ್ಕಾರದ ಗಮನ ಸೆಳೆಯುವ ಹಿನ್ನೆಲೆಯಲ್ಲಿ ನವದೆಹಲಿ ಭಾರತೀಯ ಕೃಷಿ ಮಾರಾಟಗಾರರ ಸಂಘದ ಕರೆಯಂತೆ ಮಾರಾಟಗಾರರು ಸ್ವಯಂಪ್ರೇರಿತರಾಗಿ ಅಂಗಡಿ-ಮುಂಗಟ್ಟು ಬಂದ್ ಮಾಡಿ ಪ್ರತಿಭಟನೆ ನಡೆಸಿದರು.

ರಸಗೊಬ್ಬರದ ಮೇಲೆ ಮಾರಾಟಗಾರರಿಗೆ ಶೇ.8ರಷ್ಟು ಲಾಭಾಂಶ ನೀಡಬೇಕು. ಬೀಜ, ಗೊಬ್ಬರ, ಕ್ರಿಮಿನಾಶಕ ಕಳಪೆ ಗುಣಮಟ್ಟ ಕಂಡು ಬಂದರೆ ನೇರವಾಗಿ ಉತ್ಪಾದನಾ ಕಂಪನಿಗಳನ್ನು ಹೊಣೆಗಾರರನ್ನಾಗಿ ಮಾಡಬೇಕು. ಮಾರಾಟಗಾರರನ್ನು ಸಾಕ್ಷಿಗಳನ್ನಾಗಿ ಪರಿಗಣಿಸ ಬೇಕು. ಯೂರಿಯಾ ಜತೆಗೆ ಬೇಡಿಕೆ ಇಲ್ಲದ ಇತರೆ ಉತ್ಪನ್ನ ಕಡ್ಡಾಯವಾಗಿ ಖರೀದಿಸಬೇಕು ಎಂಬ ಒತ್ತಡವನ್ನು ಕೈಬಿಡಬೇಕು ಎಂದು ಒತ್ತಾಯಿಸಿದರು.

ರೈತರಿಗೆ ರಸಗೊಬ್ಬರ ವಿತರಣೆಯನ್ನು ಎಫ್‌ಐಡಿ ಮತ್ತು ಕೆ. ಕಿಸಾನ್ ತಂತ್ರಾಂಶದ ಮೂಲಕ ವಿತರಣೆಯಿಂದ ವಿನಾಯಿತಿ ನೀಡಬೇಕು. ಮಾರಾಟಗಾರರಿಗೆ ಮತ್ತು ರೈತರಿಗೆ ಸಮಸ್ಯೆಯಾಗಿರುವ ಇನ್ನೂ ಅನೇಕ ಬೇಡಿಕೆ ಈಡೇರಿಸಬೇಕು ಎಂದು ಮನವಿ ಪತ್ರದ ಮೂಲಕ ಒತ್ತಾಯಿಸಿದರು.

ಈ ವೇಳೆ ಮಲ್ಲಕಾರ್ಜುನ ತಿರ್ಲಾಪುರ, ಹರೀಶ ಮಂಗನಹಳ್ಳಿ, ಗುರುರಾಜ ಧಾರವಾಡ, ಸುರೇಶ ಯಕ್ಕುಂಡಿ, ಶ್ರೀನಿವಾಸ ಮಂಗನಹಳ್ಳಿ, ಶಶಾಂಕ ಗುಜ್ಜಳ, ಚನ್ನವೀರಪ್ಪ ಅಳಗುಂಡಗಿ, ವೀರೇಶ ಚಿಟ್ಟಿ, ಸದ್ದಾಂ ಬೆಟಗೇರಿ, ಬಸಲಿಂಗಪ್ಪ ಶೀಲವಂತರ, ಬಸನಗೌಡ ಕಲಾಲಬಂಡಿ, ಶಶಿ ತಿರ್ಲಾಪೂರ, ಚಂದಪ್ಪ ಚಲವಾದಿ ಸೇರಿದಂತೆ ಹಲವರಿದ್ದರು.

ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಕೃಷಿ ಪರಿಕರ ಮಾರಾಟಗಾರರ ಸಂಘದ ತಾಲೂಕು ಘಟಕದಿಂದ ನವಲಗುಂದದಲ್ಲಿ ತಹಸೀಲ್ದಾರ್ ಮೂಲಕ ಪ್ರಧಾನಿಗೆ ಮನವಿ ಸಲ್ಲಿಸಲಾಯಿತು.

ವ್ಯಕ್ತಿ ಮೇಲೆ ಹಲ್ಲೆ: ಇಬ್ಬರ ವಿರುದ್ಧ ಪ್ರಕರಣ ದಾಖಲು

• **ಕನ್ನಡಪ್ರಭ ವಾರ್ತೆ** ಹುಬ್ಬಳ್ಳಿ

ಮಾತುಕೇಳುತ್ತಿಲ್ಲಎನ್ನುವಕೋಪದಲ್ಲಿವ್ಯಕ್ತಿಯೊಬ್ಬರ ಮೇಲೆ ಹಲ್ಲೆ ನಡೆಸಿದಲ್ಲದೇ, ಅವರ ಬೈಕ್ ಸುಟ್ಟು ಹಾಕಿರುವ ಘಟನೆ ಇಲ್ಲಿನ ಕುಂದಗೋಳ ಕ್ರಾಸ್‌ನ ಎಟಿಸಿ ಗೋದಾಮಿನ ಬಳಿ ನಡೆದಿದೆ. ಹಳೇಹುಬ್ಬಳ್ಳಿ ಕೆ.ಬಿ. ನಗರದ ಚೇತನ ಬಳಗಾನೂರ ಹಾಗೂ ಲಕ್ಷ್ಮಣ ದೊಡ್ಡಮನಿ ಎಂಬುವರು ಶಿವಕುಮಾರ ತುಮಕೂರ ಎಂಬುವರ ಮೇಲೆ ತೀವ್ರವಾಗಿ ಹಲ್ಲೆ ನಡೆಸಿದ್ದಾರೆ.

ಮೊದಲು ಮಾತು ಕೇಳುತ್ತಿದ್ದ ಶಿವಕುಮಾರ ಇತ್ತೀಚೆಗೆ ಮಾತು ಕೇಳುತ್ತಿಲ್ಲ ಎಂದು ಸಿಟ್ಟಾದ ಆರೋಪಿಗಳು, ಪಾರ್ಟಿ ಮಾಡಲು ಹೋದಾಗ ಆತನ ತಲೆ, ಮೈ, ಕೈ-ಕಾಲುಗಳಿಗೆ ಕಲ್ಲು ಮತ್ತು ಕಟ್ಟಿಗೆಯಿಂದ ಹಲ್ಲೆ ನಡೆಸಿದ್ದಾರೆ. ಅಲ್ಲದೇ, ಅವರಿಗೆ ಸಂಬಂಧಿಸಿದ ₹ 45 ಸಾವಿರ ಮೌಲ್ಯದ ಬೈಕ್ ಸುಟ್ಟು ಹಾಕಿದ್ದಾರೆ ಎಂದು ದೂರಲಾಗಿದೆ.

ಈ ಕುರಿತು ಹುಬ್ಬಳ್ಳಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡ ರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ-562114, ಬೆಂಗಳೂರು ಗ್ರಾಮಾಂತರ ಜಿಲ್ಲೆ.
ದೂರವಾಣಿ/ಫ್ಯಾಕ್ಸ್ : 080-2793 4470 / 2793 5412 ಇ-ಮೇಲ್: hosakote.pa@gmail.com URL : www.hosakote.tpa.gov.in

ಸಂಖ್ಯೆ: ಹೊಯೋಪ್ರಾ/ಭೂ.ಉ.ನಿ/02/2026–27 ದಿನಾಂಕ: 28.04.2026

ಸಾರ್ವಜನಿಕ ಪ್ರಕಟಣೆ

ವಿಷಯ: ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 69 (2) ಮತ್ತು (3) ರಡಿಯಲ್ಲಿ ಸಾರ್ವಜನಿಕ ಮತ್ತು ಅರೆ–ಸಾರ್ವಜನಿಕ ವಲಯದಲ್ಲಿ ಕಾಯ್ದಿರಿಸಲಾಗಿರುವ ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಉಪಯೋಗ ನಿಗದಿಪಡಿಸಲು ಕೋರಿರುವ ಬಗ್ಗೆ.

***

ಅರ್ಜಿದಾರರಾದ ಲೇಟ್ ಹೆಚ್.ಎಂ. ಮುನಿಯಪ್ಪ ಇವರ ಮಕ್ಕಳಾದ ಶ್ರೀ ಮುನಿಕೆಂಪಣ್ಣ ಮತ್ತು ಶ್ರೀ ಎಂ. ಹುಲ್ಲೂರಪ್ಪ ಇವರ ಪರವಾಗಿ ಜಿಪಿಎದಾರರಾದ ಮೆ॥ ವಿ.ಆರ್. ಅರ್ಬನ್ ಡೆವಲಪರ್ಸ್ ಇದರ ಪರವಾಗಿ ಮ್ಯಾನೇಜಿಂಗ್ ಪಾರ್ಟ್‌ನರ್ ಆದ ಶ್ರೀ ಕಿಶೋರ್ ಆರ್. ಇವರು ಹೊಸಕೋಟೆ ತಾಲ್ಲೂಕು, ಕಸಬಾ ಹೋಬಳಿ, ಕಣ್ಣೂರಹಳ್ಳಿ ಗ್ರಾಮದ ಸ.ನಂ. 163/1 ರ ಪೈಕಿ 16 1/2 ಗುಂಟೆ ವಿಸ್ತೀರ್ಣದ ಜಮೀನನ್ನು **"ಸಾರ್ವಜನಿಕ ಮತ್ತು ಅರೆ–ಸಾರ್ವಜನಿಕ ಉದ್ದೇಶದಿಂದ ವಸತಿ ಉದ್ದೇಶಕ್ಕೆ"** ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 69 (2) ಮತ್ತು (3) ರಡಿಯಲ್ಲಿ ಭೂ ಉಪಯೋಗ ನಿಗದಿಪಡಿಸಲು ಕೋರಿರುತ್ತಾರೆ.

ಅರ್ಜಿದಾರರ ಮನವಿಯನ್ನು ಪರಿಶೀಲಿಸಲಾಗಿ, ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಿ ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆಯಲ್ಲಿ **ಸಾರ್ವಜನಿಕ ಮತ್ತು ಅರೆ–ಸಾರ್ವಜನಿಕ ವಲಯದಲ್ಲಿ ಕಾಯ್ದಿರಿಸಲಾಗಿರುವ** ಜಮೀನಿನ ಸುತ್ತಮುತ್ತಲಿನ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು/ ಬರುತ್ತಿದ್ದು, "ಸದರಿ ಜಮೀನಿನಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಯೋಜನಾಬದ್ಧವಾದ ವಸತಿ ಬಡಾವಣೆಯನ್ನು ಅಭಿವೃದ್ಧಿ ಪಡಿಸಲು ಉದ್ದೇಶಿಸಿರುವುದರಿಂದ ಸಾರ್ವಜನಿಕರಿಗೆ ಕಡಿಮೆ ದರದಲ್ಲಿ ಉತ್ತಮವಾದ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒಳಗೊಂಡ ವಸತಿ ನಿವೇಶನಗಳನ್ನು ಒದಗಿಸಿ ಕೊಡುವುದರ ಜೊತೆಗೆ ನಗರದ ಯೋಜನಾ ಬದ್ಧವಾದ ಬೆಳವಣಿಗೆಯಾಗುವುದು" ಎಂಬ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುತ್ತದೆ ಎಂದು ಅರ್ಜಿದಾರರು ತಮ್ಮ ಪ್ರಮಾಣ ಪತ್ರದ ಮುಖಾಂತರ ತಿಳಿಸಿರುತ್ತಾರೆ.

ಹಾಗಾಗಿ, ಸದರಿ ಭೂ ಉಪಯೋಗ ನಿಗದಿಪಡಿಸುವ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ / ಇತರರಿಗೆ / ಪರಿಸರಕ್ಕೆ ಉಂಟಾಗಬಹುದಾದಂತಹ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ಸಲಹೆ/ಸೂಚನೆ/ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡ ರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ–562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ/ಸೂಚನೆ/ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.

ವಾ.ಸಾ.ಸಂ.ಇ/ವಾಪ್ರ/425/ಆಕಾರ್/2026–27

ಮೇ 4ಕ್ಕೆ ಚಳವಳಿಯ ಮುಂದಿನ ಹೋರಾಟದ ಪೂರ್ವಭಾವಿ ಸಭೆ

• **ಕನ್ನಡಪ್ರಭ ವಾರ್ತೆ** ಹುಬ್ಬಳ್ಳಿ

ಐದು ವಿಮಾನ ನಿಲ್ದಾಣಗಳಿಗೆ ಕನ್ನಡ ಮಹನೀಯರ ನಾಮಕರಣ ಚಳವಳಿಯ ಮುಂದಿನ ಹೋರಾಟದ ಕುರಿತು ಮೇ 4ರಂದು ಸಂಜೆ 4ಕ್ಕೆ ಇಲ್ಲಿನ ಖಾಸಗಿ ಹೋಟೆಲ್‌ನಲ್ಲಿ ಪೂರ್ವಭಾವಿ ಸಭೆ ಹಾಗೂ ಸಮಿತಿ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಸಂಚಾಲಕ ಶಿವಾನಂದ ಮುತ್ತಣ್ಣವರ ಹೇಳಿದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹುಬ್ಬಳ್ಳಿ ವಿಮಾನ ನಿಲ್ದಾಣಕ್ಕೆ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ, ಬೆಳಗಾವಿ ವಿಮಾನ ನಿಲ್ದಾಣಕ್ಕೆ ಕಿತ್ತೂರು ರಾಣಿ ಚೆನ್ನಮ್ಮ, ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ರಾಷ್ಟ್ರಕವಿ ಕುವೆಂಪು, ವಿಜಯಪುರ ವಿಮಾನ ನಿಲ್ದಾಣಕ್ಕೆ ಜಗಜ್ಯೋತಿ ಬಸವೇಶ್ವರರ ಹೆಸರಿಡುವಂತೆ ಬೆಳಗಾವಿ ಅಧಿವೇಶನದಲ್ಲಿ ಒಕ್ಕೊರಲಿನಿಂದ ನಿರ್ಣಯಿಸಲಾಗಿದೆ. ಉಭಯ ಸದನದಲ್ಲಿ ಅನುಮೋದನೆಗೊಂಡು ಕೇಂದ್ರಕ್ಕೆ ಶಿಫಾರಸು ಮಾಡಲಾಗಿದೆ ಎಂದರು. ಆದರೆ, ಶಿಫಾರಸು ಮಾಡಿ ಎರಡುವರೆ ವರ್ಷ ಕಳೆದರೂ ಈ ವರೆಗೂ ಕೇಂದ್ರ ವಿಮಾನಯಾನ ಸಚಿವರು ನಿರ್ಣಯ ಕೈಗೊಳ್ಳದೇ ಕಾಲಹರಣ ಮಾಡುತ್ತಿದ್ದಾರೆ. ಈ ಬಗ್ಗೆ ಸಾಕಷ್ಟು ಹೋರಾಟ ಮಾಡಿದರೂ ಸ್ಪಂದಿಸದಿರುವುದು ನೋವಿನ ಸಂಗತಿ ಎಂದು ಆಕ್ರೋಶ ವ್ಯಕ್ತಪಡಿಸಿದರು. ಮೇ. 5ರಂದು ಸಂಜೆ 5ಕ್ಕೆ ಕುಂದಗೋಳ ತಾಲೂಕಿನ ಯರಗುಪ್ಪಿಯಲ್ಲಿ ಅಡಿವೆಪ್ಪ ಶಿವಳ್ಳಿ ಅಧ್ಯಕ್ಷತೆಯಲ್ಲಿ ಮತ್ತೊಂದು ಸಭೆ ಮಾಡಲಾಗುತ್ತಿದ್ದು, ಸಭೆಯನ್ನು ಶಾಸಕ ವಿಜಯಾನಂದ ಕಾಶಪ್ಪನವರ ಉದ್ಘಾಟಿಸುವರು. ಇದೇ ವೇಳೆ 3ನೇ ಹಂತದ ಹೋರಾಟದ ದಿನಾಂಕ ಹೊರಡಿಸಲಾಗುವುದು. ಮುಂದಿನ ಹೋರಾಟಕ್ಕೆ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷೆ ಜಯಮಾಲಾ, ಕನ್ನಡ ಹೋರಾಟಗಾರ ಸಾ.ರಾ. ಗೋವಿಂದ, ಕಲಾವಿದರ ಸಂಘದ ಅಧ್ಯಕ್ಷ ರಾಕ್‌ಲೈನ್ ವೆಂಕಟೇಶ, ನಟರಾದ ಡಾ. ಶಿವರಾಜಕುಮಾರ, ಯಶ್, ಸುದೀಪ, ರವಿಚಂದ್ರನ್, ಉಪೇಂದ್ರ, ದುನಿಯಾ ವಿಜಯ ಸೇರಿದಂತೆ ವಿವಿಧ ನಟರು ಹುಬ್ಬಳ್ಳಿಯಲ್ಲಿ ನಡೆಯುವ ಹೋರಾಟದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಮಲ್ಲಿಕಾರ್ಜುನ ತಾಲೂರ, ದ್ಯಾಮಣ್ಣ ಡೊಂಗಿ, ರಾಜು ಜೋಸೆಫ್, ಬಾಳಮ್ಮ ಜಂಗಿನವರ, ವೆಂಕಟ ಸತ್ತಿ ಸೇರಿದಂತೆ ಹಲವರಿದ್ದರು.

ಪೆನ್ಶನ್ ಹಣಕ್ಕಾಗಿ ತಂದೆ ಮೇಲೆ ಹಲ್ಲೆ

ಹುಬ್ಬಳ್ಳಿ: ಪೆನ್ಶನ್ ಹಣ ನೀಡದ ವಿಚಾರಕ್ಕೆ ತಂದೆ ಮೇಲೆ ಹಲ್ಲೆ ನಡೆಸಿ ಮನೆಯಲ್ಲಿ ಅವರನ್ನು ಕೂಡಿಟ್ಟು ಜೀವ ಬೆದರಿಕೆ ಹಾಕಿದ ಮಗನ ವಿರುದ್ಧ ಇಲ್ಲಿನ ಕೇಶ್ವಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕೇಶ್ವಾಪುರದ ನಾಗರಾಜ ಬೆಲ್ಲದ ಎಂಬಾತನೇ ತಂದೆ ಮೇಲೆ ಹಲ್ಲೆ ನಡೆಸಿ ಮನೆಯಲ್ಲಿ ಕೂಡಿ ಹಾಕಿದ ಆರೋಪಿ. ಕಲಬುರಗಿ ಜಿಲ್ಲೆಯ ಚೌಡಾಪುರದ 74 ವರ್ಷದ ಡಾ. ಬಾಬುರಾವ್ ಬೆಲ್ಲದ ಅವರು ತಮ್ಮ ಗೆಳೆಯನೊಂದಿಗೆ ಮೊಮ್ಮಗನನ್ನು ನೋಡಲು ಬಂದಿದ್ದ ವೇಳೆ ಈ ಘಟನೆ ನಡೆದಿದೆ. ಮನೆಗೆ ಬಂದ ತಂದೆಗೆ ಪೆನ್ಶನ್ ಹಣ ನೀಡುವಂತೆ ಅವರ ಮಗ ನಾಗರಾಜ ಅವರ ಮೇಲೆ ಹಲ್ಲೆ ನಡೆಸಿ ಮನೆಯಿಂದ ಹೊರ ಹೋಗದಂತೆ ತಡೆದು ಜೀವ ಬೆದರಿಕೆ ಹಾಕಿದ್ದಾರೆ ಎಂದು ದೂರಲಾಗಿದೆ.